**ಪಿ. ಡಬ್ಲ್ಯೂಃ 1**

(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 26-03-2025)

**ಮುಖ್ಯ ವಿಚಾರಣೆ : ವಾದಿಗಳ ಪರ ಶ್ರೀ ವಿ ಎಫ್ ಜಿ ವಕೀಲರಿಂದ,**

ನಾನು ಈ ದಾವೆಯಲ್ಲಿ 1 ನೇ ವಾದಿ ಇದ್ದು, ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಾನು ಓದಿ ನೋಡಿ ಸಹಿ ಮಾಡಿರುತ್ತೇನೆ. ಅದರಲ್ಲಿ ಬರೆದ ಎಲ್ಲಾ ವಿಷಯಗಳು ನಿಜ ಇರುತ್ತವೆ .

ದಾವಾ ಆಸ್ತಿಗೆ ಸಂಬಂಧಿಸಿದಂತೆ ದಾವಾ ಆಸ್ತಿಯ ನಾಲ್ಕು ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-1 ರಿಂದ 4 ಎಂದು, ದಿನಾಂಕ 21-09-1990 ರ ವಿಲುನಾಮೆಯ ಧೃಡಿಕೃತ ನಕಲನ್ನು ಹಾಜರುಪಡಿಸಿದ್ದು ಅದರ ಮೂಲ ಪ್ರತಿ ಪ್ರತಿವಾದಿಗಳ ಬಳಿ ಇರುತ್ತದೆ, ಅದನ್ನು ನಿಪಿ-5 ಎಂದು, ಶಿರಾಲಿ -2 ಗ್ರಾಮದ ಮ್ಯುಟೇಶನ್ ಎಂಟ್ರಿ ಸಂಖ್ಯೆ ಎ4537, ಎ4848 ರ ಯಥಾನಕಲಗಳನ್ನು ಹಾಜರುಪಡಿಸಿದ್ದು ಅದನ್ನು ನಿಪಿ-6 ಮತ್ತು 7 ಎಂದು, ಶಿರಾಲಿ -2 ಗ್ರಾಮದ ಮ್ಯುಟೇಶನ್ ಎಂಟ್ರಿ ಸಂಖ್ಯೆ 3780 ರ ಯಥಾ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-8 ಎಂದು, ದಿನಾಂಕ 19.10.2020 ರಂದು ಪಂಚಾಯತಿ ಅಭಿವೃದ್ಧಿ ಅಧಿಕಾರಿ ಶಿರಾಲಿಯವರು ನೀಡಿದ ಧೃಡಿಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-9 ಎಂದು, ದಾವಾ ಆಸ್ತಿಯಲ್ಲಿರುವ ಮನೆಗೆ ಸಂಬಂಧಿಸಿದಂತೆ ಎರಡು ಫೋಟೋಗಳನ್ನು ಮತ್ತು ಡಿವಿಡಿಯನ್ನು ಹಾಜರುಪಡಿಸಿದ್ದು ಸದ್ರಿ ಫೋಟೊಗಳನ್ನು ಮತ್ತು ಡಿವಿಡಿಯನ್ನು ಗುರುತಿಸಲು 2 ರಿಂದ 4 ನೇ ಪ್ರತಿವಾದಿಗಳ ಪರ ವಕೀಲರು ಫೋಟೊಗಳಲ್ಲಿ ಕಂಡುಬರುವ ಮನೆಯ ದಾವಾ ಆಸ್ತಿಯಲ್ಲಿ ಇರುವುದಿಲ್ಲ ಎಂದು ತಕರಾರು ಮಾಡಿದ್ದು, ಸದ್ರಿ ತಕರಾರನ್ನು ಈಗ ನಿರ್ಧರಿಸಲು ಆಗದೇ ಇರುವುದರಿಂದ ಈ ದಾವೆಯ ಅಂತಿಮ ಆದೇಶದ ಸಮಯದಲ್ಲಿ ಸಾಕ್ಷ್ಯಗಳ ವಿಮರ್ಶೆ ಮಾಡುವ ಕಾಲಕ್ಕೆ ಪರಿಗಣಿಸಲಾಗುವುದೆಂದು ತೀರ್ಮಾನಿಸಿ, 2 ರಿಂದ 4 ನೇ ಪ್ರತಿವಾದಿಗಳ ತಕರಾರಿಗೆ ಒಳಪಟ್ಟು ಸದ್ರಿ ಫೋಟೊಗಳನ್ನು ಮತ್ತು ಡಿವಿಡಿಯನ್ನು ಸಾಕ್ಷ್ಯ ಅಧಿನಿಯಮದ ಕಲಂ 65 ಬಿ ಯ ಅನ್ವಯಕ್ಕೊಳಪುಟ್ಟು ಅದನ್ನು ನಿಪಿ-10 ಮತ್ತು 11 ಎಂದು, ಸದ್ರಿ ಫೋಟೊಗೆ ಸಂಬಂಧಿಸಿದ ಡಿವಿಡಿ ಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-11 ಎ ಎಂದು, ಮನೆಗೆ ಸಂಬಂಧಿಸಿದಂತೆ ತೆರಿಗೆ ರಶೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-12 ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ವಾದಿಗಳ ಪರ ವಕೀಲರು ಕಾಲಾವಕಾಶ ಕೇಳಿದ್ದರಿಂದ ಮುಂದೂಡಲಾಯಿತು.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ಸಿವಿಲ್ ಜಡ್ಜ್, ಭಟ್ಕಳ.**